ಕಾರ್ಯಗತಗೊಳಿಸುವುದು ಕಷ್ಟ ಸಾಧ್ಯವಾಗುತ್ತಿದೆ. ಆದರೂ ಹೆಚ್ಚುವರಿ ತೂಬಿನ ಸಾಧ್ಯ ಸಾಧ್ಯತೆಗಳನ್ನು ತನಿಖೆ ಮಾಡಿಸಿ ನೀರೊದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕು ಕಡೇಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಅವ್ಯವಹಾರ

1863(2307): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತುರುವೇಕೆರೆ ತಾಲ್ಲುಕು ದಬ್ಬೇಗಟ್ಟ ಹೋಬಳಿ ಕಡೇಹಳ್ಳಿ ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿ ಎಷ್ಟು ವರ್ಷದಿಂದ ನಡೆಯುತ್ತಿದೆ;

ಆ. ಅನೇಕ ವರ್ಷಗಳಿಂದ ಆ ಗ್ರಾಮದ ಮತ್ತು ಸುತ್ತಮುತ್ತ ಗ್ರಾಮದ ಜನರಿಗೆ ನ್ಯಾಯ ಬೆಲೆ ಅಂಗಡಿಯವರು ಎಲ್ಲಾ ರೀತಿಯಲ್ಲಿ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಅಕ್ಕಿ ಹಾಗೂ ಸೀಮೆಎಣ್ಣೆಯನ್ನು ಜನರಿಗೆ ಕೊಡದೇ ಕಾಳಸಂತೆಯಲ್ಲಿ ಮಾರಿರುವುದು ನಿಜವೇ?

ಈ. ಹಾಗಿದ್ದಲ್ಲಿ, ಈ ನ್ಯಾಯಬೆಲೆ ಅಂಗಡಿಯ ಮಾಲೀಕರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

ಉ. ತಕ್ಷಣ ಬೇರೆ ವ್ಯವಸ್ಥೆಯ ಮೂಲಕ ಆ ಗ್ರಾಮದ ಜನರಿಗೆ ರೇಷನ್ ಕೊಡಲಾಗುವುದೇ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. 11 ವರ್ಷಗಳಿಂದ

ಆ. ಅವ್ಯವಹಾರದ ವಿಷಯವು ಪರಿಶೀಲನೆಯಲ್ಲಿದೆ.

ಇ. ಪರಿಶೀಲನೆಯಲ್ಲಿದೆ

ಈ. ಜಿಲ್ಲಾಧಿಕಾರಿಗಳು ದಿ: 21.12.01 ರಂದು ವಿಚಾರಣೆಯನ್ನು ಕಾಯ್ದಿರಿಸಿ ನ್ಯಾಯಬೆಲೆ ಅಂಗಡಿ ಪ್ರಾಧಿಕಾರವನ್ನು ಅಮಾನತ್ತು ಪಡಿಸಿರುತ್ತಾರೆ. ರಿವಿಜನ ಅರ್ಜಿಯ ಆಧಾರದ ಮೇಲೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಜಿಲ್ಲಾಧಿಕಾರಿಗಳ ಆದೇಶಕ್ಕೆ ದಿ: 6.4.02 ರಂದು ತಡೆಯಾಜ್ಞೆಯನ್ನು ನೀಡಿ ವಿಚಾರಣೆಯನ್ನು ಮುಂದುವರೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುತ್ತಾರೆ.

ಉ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಬರಗಾಲವಿರುವಾಗ ಸಹಕಾರ ಬ್ಯಾಂಕುಗಳ ಸಾಲ ವಸೂಲಾತಿ ನಿಲ್ಲಿಸುವುದು

1864(2308): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕಳೆದ 2 ವರ್ಷದಿಂದ ಬರಗಾಲದಿಂದ ರೈತರು ತತ್ತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?